ಲಂಗೋಟಿ ಬಲುವೊಳ್ಳೆದಣ್ಣ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 504.
2. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page no. 76.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 109.
4. **Note:** Lyrics mentioned here are as per Ref. 1. The wordings in Ref. 2 and Ref. 3 are slightly different and are not considered here.
5. **Note:** Singer has followed these wordings.

ರಾಗ: ನಾದನಾಮಕ್ರಿಯ ತಾಳ: ಅಟ

ಲಂಗೋಟಿ ಬಲುವೊಳ್ಳೆದಣ್ಣ, ಒಬ್ಬ –
ಹರ್ಷಂಗಿಲ್ಲದೆ ಮಡಿಗೆ ಒದಗುವುದಣ್ಣ || ಪ ||

ಬಡವರಿಗಾಧಾರವಣ್ಣ, ಈ ಲಂಗೋಟಿ
ಬೈರಾಗಿಗಳ ಭಾಗ್ಯವಣ್ಣ
ಕಡು ಕಳ್ಳರಿಗೆ ಗಂಡ, ಮಡಿ ಧೋತ್ರಗಳ ಮಿಂಡ
ನಡುಗುವ ಸಮಯಕ್ಕೆ ಮಡಿಗೆ ಒದಗುವಂಥ || 1 ||

ಜಿತಮನ ಸನ್ಯಾಸಿಗಳಿಗಿದೆ ಕೌಪೀನ
ವ್ರತವುಳ್ಳ ಬ್ರಹ್ಮಚಾರಿಗೆ ಮುಖ್ಯವು
ಅತಿಶಯವಿದೆ ಆಂಜನೇಯ ನಾರದರಿಗೆ
ಗತಿಯಿಲ್ಲದವರಿಗೆ ಮಿತವಾಗಿ ಇರುವಂಥ || 2 ||

ದುಡ್ಡು ಮುಟ್ಟದಂತೆ ದೊರಕುವ ವಸ್ತುವು
ದೊಡ್ಡ ಅರಣ್ಯದಿ ಭಯವಿಲ್ಲವು
ಹೆಡ್ಡರೆಂಬುವರೇನೊ ಲಂಗೋಟಿ ಜನರನ್ನು
ದೊಡ್ಡವರೆಂದು ವಂದಿಸುವರು ಯತಿಗಳ || 3 ||

ಮೋಕ್ಷ ಮಾರ್ಗಕೆ ಕಲ್ಪವೃಕ್ಷವೀ ಲಂಗೋಟಿ
ಭಿಕ್ಷಗಾರರಿಗೆಲ್ಲ ಅನುಕೂಲವು
ತತ್‌ಕ್ಷಣದೊಳಗೆ ಕಾರ್ಯಗಳ ತೂಗಿಸಿ ಮಾನ-
ರಕ್ಷಣೆಗೆ ಬಹು ರಮ್ಯವಾಗಿರುವಂಥ ‖ 4 ‖

ಮಡಿವಾಳರಿಗೆ ಶತ್ರು, ಮಠದಯ್ಯಗಳ ಮಿತ್ರ
ಪೊಡವಿಯೊಳ್ ಯಾಚಕರಿಗೆ ನೆರವು
ದೃಢಭಕ್ತ ಬಲಿ ಚಕ್ರವರ್ತಿಗೋಸ್ಕರ ನಮ್ಮ
ಒಡೆಯ ಶ್ರೀ ಪುರಂದರ ವಿಠಲ ದರಿಸಿದಂಥ ‖ 5 ‖

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಸಂಪತ್ತಿನ ಉಪಾಧಿ ಒಳ್ಳೆಯದಲ್ಲವೆಂಬುದನ್ನು ದಾಸರು ತಮ್ಮ ಈ ಲಂಗೋಟಿಯ ಪದದಲ್ಲಿ ವಿನೋದವಾಗಿ ವಿವರಿಸಿದ್ದಾರೆ.

ಇಲ್ಲಿ ಲಂಗೋಟಿಯೆಂದರೆ ಮೊಳಕಾಲಿಂದ ಮೇಲೆ ಸೊಂಟದವರೆಗೆ ಮೈಮುಚ್ಚುವ ಬಟ್ಟೆ; ಸಂಸ್ಕೃತದಲ್ಲಿ ಕೌಪೀನ (‘ಮೇಖಲಾಬದ್ಧ ಪರಿಧೇಯ ವಸ್ತ್ರಖಂಡಂ,’ ಸೊಂಟಕ್ಕೆ ಸುತ್ತುವ ತುಂಡುಬಟ್ಟೆ) ಇದನ್ನು ಸಂನ್ಯಾಸಿಗಳಿಗೇ ವಿಶೇಷವಾಗಿ ಹೇಳಿದ್ದರೂ, ಹರಿದಾಸರಿಗೂ ಇದು ಒಪ್ಪುತ್ತದೆ; ಮಧುಕರ ವೃತ್ತಿಯಂತೆ. ಊಟದ ಸಾಮಗ್ರಿಗಾಗಿ ತಿರುಪೆ ಎತ್ತುವುದರಿಂದ ಅದರ ಅವಲಂಬನೆ ಹರಿದಾಸರಿಗಿಲ್ಲ; ಹಾಗೆಯೇ ತುಂಡು ಬಟ್ಟೆಯನ್ನು ಉಡುವುದರಿಂದ ಲೌಕಿಕರಂತೆ ಉಡುಗೆ ತೊಡುಗೆಗಳ ಅವಲಂಬನೆಯೂ ಇರದು. ‘ಒಬ್ಬರ ಹಂಗೂ ಇರದು.’ ಈ ಹಾಡಿನಲ್ಲಿ ಹರಿದಾಸರಿಗೂ ಸಂನ್ಯಾಸಿಗಳಿಗೂ ಇರುವ ಹೋಲಿಕೆಯನ್ನು ಸೂಚಿಸಿದ್ದಾರೆ.

ಜಿತಮನ = ಮನಸ್ಸನ್ನು ಗೆದ್ದವರು

ಮಡಿವಾಳರಿಗೆ ಶತ್ರು – ಇದನ್ನು ಮಡಿಮಾಡಲು ಯಾರೂ ಯಾವ ಮಡಿವಾಳನಿಗೂ (ಅಗಸನಿಗೂ) ಕೊಡಬೇಕಾದುದಿಲ್ಲ; ಇದನ್ನೇ ಬಳಸುವವರು ಮಡಿವಾಳನ ಹಂಗನ್ನೇ ತೊರೆದವರು. ಸಾಮಾನ್ಯ ಜನರಿಂದ ಮಡಿವಾಳನಿಗೆ ಆಗುವ ಲಾಭ ಲಂಗೋಟಿಯವರಿಂದ ಆಗಲಾರದು; ಆದ್ದರಿಂದ ಮಡಿವಾಳ ಅದನ್ನು ಸಿಟ್ಟಿನಿಂದ ಕಾಣುವುದು ಸಹಜವೇ.

ಮಠದಯ್ಯಗಳ – ಮಠದ ಸ್ವಾಮಿಗಳ.

ದೃಢಭಕ್ತ ಬಲಿ ಚಕ್ರವರ್ತಿ... – ಇಂದ್ರನಿಗೆ ಮತ್ತೆ ಸ್ವರ್ಗ ಲೋಕವನ್ನು ದೈತ್ಯನಾದ ಆದರೆ ವಿಷ್ಣು ಭಕ್ತನಾದ ಬಲಿಯಿಂದ ದೊರಕಿಸಿಕೊಡುವ ಸಲುವಾಗಿ ವಿಷ್ಣುವು ಬಾಲ ಬ್ರಹ್ಮಚಾರಿಯಂತೆ ಬಂದು ಬಲಿಯಿಂದ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿದುದು ವಾಮನಾವತಾರದ ಕಥೆ. ಈ ಸಂದರ್ಭದಲ್ಲಿ ವಾಮನನು ಸಣ್ಣ ಹುಡುಗನಾಗಿ ಕೌಪೀನ ಮಾತ್ರ ಧಾರಿಯಾಗಿ ದಂಡ ಕಮಂಡಲುಗಳನ್ನು ಹಿಡಿದು ಬಂದನೆಂದು ವಿವರ.

Classification: Keerthane
Ankita: sri purandara vittala
Location: NA
Category: Jeevana Darshana, Haridasa Deekshe, Loka Neeti
Sub-Category: langoti, badava, madi, sadhu, kalla, pati, mana, vrata, hanuma, narada, rokka, kaadu, bhaya, jana, moksha, mukti, kalpavruksha, bhikshe, mitra, bali, shatru,
Pravachana: NA
Explanation: NA